**<u>ಎಸ್ ಸಿ ನಂ.121/2021 ಪಿಡಬ್ಲ್ಯೂ.26</u>**

**<u>ಮಧ್ಯಂತರ ಅರ್ಜಿ ಮೇಲಿನ ಆದೇಶ ದಿನಾಂಕ 24.11.2025 ರ ಆದೇಶದಂತೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 04.12.2025.</u>**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಆರ್ ವಿ ವಕೀಲರಿಂದಃ</u>**

1. ನಾನು 2017 ರಲ್ಲಿ ಇಲಾಖೆಗೆ ತಹಶೀಲ್ದಾರ್ ಆಗಿ ನೇಮಕಗೊಂಡಿದ್ದೆ. ನಾನು ಇಲಾಖೆಗೆ ಸೇರಿದ ನಂತರ ಕರ್ತವ್ಯಗಳನ್ನು ಹೇಗೆ ನಿರ್ವಹಿಸಬೇಕು, ಗುರುತು ಹಚ್ಚುವ ಪೆರೆಡ್ ಗಳನ್ನು ಯಾವ ರೀತಿ ಮಾಡಬೇಕು ಮತ್ತು ಇತರ ಇಲಾಖಾ ಸಂಬಂಧಿ ಕೆಲಸಗಳನ್ನು ನಿರ್ವಹಿಸುವ ಬಗ್ಗೆ ಸೂಕ್ತ ತರಬೇತಿ ಪಡೆದಿದ್ದೇನೆ. ಒಬ್ಬ ವ್ಯಕ್ತಿಯನ್ನ ಗುರುತು ಹಚ್ಚಬೇಕಾದಲ್ಲಿ ಎಷ್ಟು ಮಂದಿಯ ಮಧ್ಯೆ ನಿಲ್ಲಿಸಿ ಗುರುತು ಹಚ್ಚಬೇಕು ಎಂದು ಈಗ ಜ್ಞಾಪಕ ಇಲ್ಲ. ಒಬ್ಬ ಸಂಶಯಿತ ವ್ಯಕ್ತಿಯನ್ನು ಗುರುತು ಹಚ್ಚಬೇಕಾದರೆ ಇತರೆ 6 ಜನರ ಮಧ್ಯೆ ನಿಲ್ಲಿಸಿ ಗುರುತು ಹಚ್ಚಬೇಕು ಎಂಬ ನಿಯಮ ಇದೆ ಎಂದರೆ ಇರಬಹುದು. ಒಂದು ಸಾಲಿನಲ್ಲಿ ಒಬ್ಬರಿಗಿಂತ ಹೆಚ್ಚು ಸಂಶಯಿತ ವ್ಯಕ್ತಿಗಳನ್ನು ನಿಲ್ಲಿಸಿ ಏಕ ಕಾಲದಲ್ಲಿ ಗುರುತು ಹಚ್ಚುವ ಕವಾಯತು ಮಾಡುವಂತಿಲ್ಲ ಎಂದರೆ ಇರಬಹುದು. ನನಗೆ ತನಿಖಾಧಿಕಾರಿಗಳು ಮಾಡಿದ ದಿನಾಂಕ 06.06.2021 ರ ಮನವಿ ಯಾವತ್ತು ನಮ್ಮ ಕಛೇರಿಯಲ್ಲಿ ಸ್ವೀಕೃತವಾಗಿದೆ ಎಂದು ಈಗ ನೆನಪಿಲ್ಲ. ದಿನಾಂಕ 06.06.2021 ರ ಮನವಿಯ ನಂತರ ತಕ್ಷಣ ಗುರುತಿನ ಪೆರೆಡ್ ನಡೆಸಲು ತೊಂದರೆ ಇರಲಿಲ್ಲ, ಆದರೆ ಇಲಾಖೆಯ ಇತರ ಕೆಲಸಗಳ ನಿಮಿತ್ತ ಸದರಿ ಗುರುತು ಕವಾಯತು ನಡೆಸಲು ಸಾಧ್ಯವಾಗಿಲ್ಲ. ಮನವಿಯ ಜೊತೆ ಗುರುತು ಹಚ್ಚಬೇಕಾದ ವ್ಯಕ್ತಿಗಳ ಫೋಟೋ ಕಳುಹಿಸಿದ ಬಗ್ಗೆ ನೆನಪಿಲ್ಲ. ಗುರುತು ಹಚ್ಚುವ ಕವಾಯತು ನಡೆಸುವಾಗ ಗುರುತು ಹಚ್ಚಬೇಕಾದ ವ್ಯಕ್ತಿಗೆ ಸಮ ಹೋಲುವ ಮತ್ತು ಅದೇ ರೀತಿ ದೇಹದಾರ್ಢ್ಯ ಅಥವಾ ಅಂಗಸೌಷ್ಟವ ಹೊಂದಿರುವ ವ್ಯಕ್ತಿಗಳನ್ನೇ ಸಾಲಿನಲ್ಲಿ ನಿಲ್ಲಿಸಿ ಕವಾಯತು ನಡೆಸಬೇಕು ಎಂದರೆ ಸರಿ. ಗುರುತು ಹಚ್ಚುವ ಕವಾಯಿತ ವರದಿಯಲ್ಲಿ ಸಂಶಯಿತ ವ್ಯಕ್ತಿಯ ಜೊತೆ ನಿಲ್ಲಿಸಿದ ಇತರೆ ವ್ಯಕ್ತಿಗಳ ಎತ್ತರ ಮತ್ತು ಇತರೆ ಚಹರೆಗಳನ್ನು ನಮೂದಿಸಬೇಕು ಎಂದರೆ ಸರಿ. ನನ್ನ ವರದಿಯಲ್ಲಿ ಸದರಿ ವ್ಯಕ್ತಿಗಳ ಚಹರೆ ಮತ್ತು ಎತ್ತರದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಾನು ಮೂರು ಜನ ಆರೋಪಿಗಳಾದ 2, 4 ಮತ್ತು 8 ರವರನ್ನು ಒಂದೇ ಸಾಲಿನಲ್ಲಿ ಇತರ ವ್ಯಕ್ತಿಗಳ ಜೊತೆ ನಿಲ್ಲಿಸಿ ಕವಾಯತು ನಡೆಸಿದ್ದೇನೆಂದರೆ ಸರಿ. ಸದರಿ ಕವಾಯತಿನ ಮೊದಲ ಸುತ್ತಿನಲ್ಲಿ ನಿಲ್ಲಿಸಿದ

15 ಜನರಲ್ಲಿ ಎರಡನೇ ವ್ಯಕ್ತಿ ಚೇತನ್ ಅತ್ಯಂತ ಹೆಚ್ಚು ವಯಸ್ಸಿನ ವ್ಯಕ್ತಿ ಮತ್ತು 4 ನೇ ವ್ಯಕ್ತಿ ಪ್ರಮೋದ್ ಅತ್ಯಂತ ಕಡಿಮೆ ವಯಸ್ಸಿನ ವ್ಯಕ್ತಿ ಎಂದರೆ ಸರಿ. 2 ನೇ ಸುತ್ತಿನಲ್ಲಿ ಕೂಡ 1 ನೇ ಸುತ್ತಿನಲ್ಲಿ ಭಾಗವಹಿಸಿದ ಉಳಿದ 12 ಜನ ವ್ಯಕ್ತಿಗಳು ಇದ್ದರು ಎಂದರೆ ಸರಿ. ಕವಾಯತಿನಲ್ಲಿ ಭಾಗವಹಿಸುವ ಎಲ್ಲಾ ವ್ಯಕ್ತಿಗಳ ಬಟ್ಟೆಗಳು ಸಾಧ್ಯವಾದಷ್ಟು ಮಟ್ಟಿಗೆ ಒಂದೇ ತರಹ ಇರಬೇಕು ಎಂದರೆ ಸರಿ. ಗುರುತು ಕವಾಯತ್ತು ಪತ್ತೆ ಕಾರ್ಯ ನಡೆಸುವಾಗ ಸದರಿ ಬಂಧಿಖಾನೆಯ ಮುಖ್ಯಸ್ಥರು ಹಾಜರು ಇರಬೇಕು ಎಂದರೆ ಸರಿ. ನಾನು ಕವಾಯತು ನಡೆಸುವಾಗ ಮಂಡ್ಯ ಜಿಲ್ಲಾ ಕಾರಾಗೃಹದ ಮುಖ್ಯಸ್ಥರು/ಅಧೀಕ್ಷಕರು ಹಾಜರು ಇದ್ದರು. ನನ್ನ ವರದಿ ನಿಪಿ.36 ರಲ್ಲಿ ಅಧೀಕ್ಷಕರು ಹಾಜರು ಇದ್ದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಯಾವುದೇ ಗುರುತು ಹಚ್ಚುವ ಕವಾಯತಿನಲ್ಲಿ ಸದರಿ ಸ್ಥಳದ ಮುಖ್ಯಸ್ಥರು ಹಾಜರು ಇದ್ದರೆ ಅವರ ಸಹಿ ಪಡೆಯಬೇಕು ಎಂದರೆ ಇರಬಹುದು. ನಾನು ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ 6 ಜನ ಆರೋಪಿಗಳಲ್ಲಿ ನಿಂತುಕೊಂಡಿರುವ ಮೂರು ಜನ ಆರೋಪಿಗಳು ಒಂದೇ ರೀತಿ ಇಲ್ಲ. ಸದರಿ ನಾನು ಮಾಡಿದ ಗುರುತು ಹಚ್ಚುವ ಕವಾಯತಿನಲ್ಲಿ ಒಬ್ಬ ಸಾಕ್ಷಿಯಿಂದ ಆರೋಪಿಗಳ ಗುರುತು ಹಚ್ಚುವ ಕವಾಯತು ಮಾಡಿದ್ದೇನೆ. ನನ್ನ ವರದಿಯ ಕಾಲಂ ನಂ.6 ರಲ್ಲಿ ಘಟನೆ ಸುಮಾರು 9.00 ಗಂಟೆಗೆ ರಾತ್ರಿ ಎಂದು ನಮೂದಿಸಿದ್ದೇನೆಂದರೆ ಸರಿ. ಗುರುತಿನ ಕವಾಯತು ನಡೆಸುವ ಪೂರ್ವದಲ್ಲಿ ತನಿಖೆಯ ಸಂದರ್ಭದಲ್ಲಿ ತನಿಖಾಧಿಕಾರಿಗಳು ಆರೋಪಿಗಳನ್ನು ಮುಖಕ್ಕೆ ಮಾಸ್ಕ್ ಹಾಕಿ ತನಿಖೆ ನಡೆಸಿದ್ದಾರೆಯೇ ಎಂದು ನಾನು ತಿಳಿದುಕೊಂಡಿಲ್ಲ. ದಿನಾಂಕ 27.07.2021 ರಂದು ನಾನು ವರದಿಯನ್ನು ನಾನು ನೇರವಾಗಿ ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ. ನಾನು ನಿಪಿ.36 ರಂತೆ ಯಾವುದೇ ರೀತಿಯ ಗುರುತು ಹಚ್ಚುವ ಕವಾಯತು ಮಾಡಿಲ್ಲ, ತನಿಖಾಧಿಕಾರಿಗಳ ಮಾತಿನಂತೆ ಕವಾಯತು ನಡೆಸದೇ ವರದಿ ನೀಡಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.